




# ಗಣೇಶನ ಮ್ಯೂಸಿಯಂ

**ಒಂದು ಲಕ್ಷಕ್ಕೂ ಹೆಚ್ಚು ಗಣೇಶರೂಪಿ ವಸ್ತುವಿಶೇಷಗಳ ಈ ಮ್ಯೂಸಿಯಂ, ಕಲಾಪ್ರಪಂಚದಲ್ಲಿ ಗಣೇಶ ಪಡೆದಿರುವ ಸ್ಥಾನವನ್ನು ಸೂಚಿಸುವಂತಿದೆ.**

■ ಎನ್‌. ಜಗನ್ನಾಥ ಪ್ರಕಾಶ್
ಚಿತ್ರಗಳು: ಡಿ.ಸಿ. ನಾಗೇಶ್

ಮದುವೆಯ ಕರೆಯೋಲೆಗಳಲ್ಲಿನ ಸಾಮಾನ್ಯ ಅಂಶ ಗಣೇಶನ ಚಿತ್ರ. ವಿವಾಹ ಮಹೋತ್ಸವ ನಿರ್ವಿಘ್ನವಾಗಿ ಸಾಗಲಿ ಎನ್ನುವ ಉದ್ದೇಶದಿಂದಲೋ ಏನೋ ಆಹ್ವಾನಪತ್ರಿಕೆಯ ಮೇಲೆ ಗಣೇಶನಿಗೆ ಸ್ಥಾನ ದೊರೆತಿದೆ. ಇಂಥ 7000ಕ್ಕೂ ಹೆಚ್ಚು ಲಗ್ನಪತ್ರಿಕೆಗಳ ಸಂಗ್ರಹ 'ಬೆಂಗಳೂರು ವಿಮಾನ ಕಾರ್ಖಾನೆ'ಯ ಉದ್ಯೋಗಿ ವಿ.ಎನ್. ಗಿರೀಶ್‌ಕುಮಾರ್ ಅವರಲ್ಲಿದೆ. ಸಾಧಾರಣ ಹಾಳೆಯ ಮೇಲೆ ಮೂಡಿರುವ ಗಣೇಶನೊಂದಿಗೆ, ಕಲಾವಿದರ ಸೃಜನಶೀಲತೆಯಲ್ಲಿ ಅರಳಿದ ಗಣೇಶ ಚಿತ್ತಾರಗಳ ಕಲಾಕೃತಿ ರೂಪದ ದುಬಾರಿ ಕಾರ್ಡ್‌ಗಳೂ ಸಂಗ್ರಹದಲ್ಲಿವೆ.

ಗಿರೀಶರ ಗಣೇಶನ ಸೆಳೆತಕ್ಕೆ ಪ್ರೇರಣೆ ಅವರ ಅಕ್ಕ ಗೀತಾ. ಅಕ್ಕನಿಂದ ಉಡುಗೊರೆಯಾಗಿ ಬಂದ ಗಣೇಶನ ಅಂಚೆಚೀಟಿಗಳ ಸಂಗ್ರಹದಿಂದ ಆಕರ್ಷಿತರಾದ ತಮ್ಮ ಗಣಪತಿಯ ಹಿಂದೆ ಬಿದ್ದರು. ವಿಘ್ನೇಶ್ವರನ ಕ್ಯಾಲೆಂಡರ್‌ಗಳು, ವಿವಿಧ ಅಳತೆ ರೂಪಗಳ ಗಣೇಶಮೂರ್ತಿಗಳು, ಕೀಚೈನ್–ಡಾಲರ್‌ಗಳು, ಲೋಹದ ನಾಣ್ಯಗಳು, ಹೀಗೆ ಒಂದು ಲಕ್ಷದಷ್ಟು ಗಣೇಶರೂಪಿ ವಸ್ತುವಿಶೇಷಗಳನ್ನು ಅವರು ಸಂಗ್ರಹಿಸಿದ್ದಾರೆ. ಗಣೇಶ ಮೂರ್ತಿಗಳ ಸಂಗ್ರಹಕ್ಕೆ ವಿದೇಶಗಳಲ್ಲಿನ ಬಂಧುಮಿತ್ರರು ಗಿರೀಶರಿಗೆ ನೆರವಾಗಿದ್ದಾರೆ. ಅವರ ಈ ದಾಖಲೆ ಸಂಗ್ರಹ 'ಎಕ್ಸ್‌ಕ್ಲೂಸಿವ್ ವರ್ಲ್ಡ್ ರೆಕಾರ್ಡ್ಸ್' ಪುಸ್ತಕದಲ್ಲಿ ದಾಖಲಾಗಿದೆ.

ಗಣೇಶರೂಪಿ ವಸ್ತುವಿಶೇಷಗಳಿಗೆ ಸಂಬಂಧಿಸಿದ ವಿವರಗಳನ್ನು ಗಿರೀಶ್ ಅಚ್ಚುಕಟ್ಟಾಗಿ ಬರೆದಿಟ್ಟಿದ್ದಾರೆ. 'ಗಣೇಶ ಮ್ಯೂಸಿಯಂ' ನಿರ್ವಹಣೆಯಲ್ಲಿ ಕುಟುಂಬದ ಸದಸ್ಯರೂ ಗಿರೀಶರೊಂದಿಗೆ ಕೈಜೋಡಿಸಿದ್ದಾರೆ.

ಬೆಂಗಳೂರಿನ ಮುರುಗೇಶಪಾಳ್ಯದಲ್ಲಿ ಗಿರೀಶರ ಮನೆಯಿದೆ. ಮನೆಯ ಮಹಡಿಯಲ್ಲಿನ ದೊಡ್ಡ ಕೊಠಡಿಯಲ್ಲಿ, ಹತ್ತಾರು ಕಪಾಟುಗಳಲ್ಲಿ ಗಣೇಶನ ಬಹುರೂಪಗಳು ಕಂಗೊಳಿಸುತ್ತಿವೆ. ಅಲ್ಲಿ ಎಲ್ಲಿ ನೋಡಿದರೂ ಗಣೇಶ; ಕರ್ಟನ್‌ನಲ್ಲೂ! ■